# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 59/2010

(ಪ್ರಾಸಾ-8 ಚಾಸಾ-39)

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ದಿಃ 07.07.2022

| | | |
|---|---|---|
| ಸಾಕ್ಷಿದಾರರ ಹೆಸರು | - | ರವಿಚಂದ್ರ, |
| ತಂದೆಯ ಹೆಸರು | - | ಸುಬ್ಬಯ್ಯ, |
| ವಯಸ್ಸು | - | 52 ವರ್ಷ, |
| ಉದ್ಯೋಗ | - | ವ್ಯವಸಾಯ, |
| ವಾಸ | - | ವಿಶ್ವನಾಥಪುರ. |

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಕರವರಿಂದಃ**

1. ಈಗ ತೋರಿಸಲಾದ ದಾಖಲೆ ಮೇಲೆ ನನ್ನ ಸಹಿ ಇದೆ. ಸಾಕ್ಷಿಗೆ ತೋರಿಸಿದ ದಾಖಲೆ ದಿಃ12.02.2010 ರಂದು ಮಾಡಿದ 4 ಮತ್ತು 5 ನೇ ಆರೋಪಿತರ ಬಟ್ಟೆ ಅಮಾನತು ಮಹಜರ್ ಎಂದಿದ್ದು ಅದನ್ನು ನಿಪಿ-11 ಎಂದು ಮತ್ತು ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿಪಿ-11(ಎ) ಎಂದು ಗುರ್ತಿಸಲಾಯಿತು. ಸದರಿ ದಾಖಲೆಗೆ ಈಗ ಸುಮಾರು ಹತ್ತು ವರ್ಷಗಳ ಹಿಂದೆ ವಿಶ್ವನಾಥಪುರ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ. ಠಾಣೆಯಲ್ಲಿ ಎರಡು ಶರ್ಟ್ ಮತ್ತು ಒಂದು ಚಾಕು ಇತ್ತು. ಆಗ ಸಮಯ ಮಧ್ಯಾಹ್ನ ಸುಮಾರು 3 ಘಂಟೆ ಆಗಿತ್ತು. ಪೋಲಿಸ್ ಸ್ಟೇಷನ್ ಮುಂದೆ ಸರ್ಕಲ್ ಇದೆ. ನಾನು ಅಲ್ಲಿದ್ದಾಗ ಪೋಲಿಸರು ಕರೆದರು. ನಾನು ಠಾಣೆಗೆ ಹೋದೆ.

2. ಈಗ ತೋರಿಸಲಾದ ಇನ್ನೊಂದು ದಾಖಲೆ ಮೇಲೆ ನನ್ನ ಸಹಿ ಇದೆ. ಸಾಕ್ಷಿಗೆ ತೋರಿಸಿದ ದಾಖಲೆ ದಿಃ13.02.2010 ರಂದು ಮಾಡಿದ 2 ಚಾಕುಗಳ ಅಮಾನತು ಮಹಜರ್ ಎಂದಿದ್ದು ಅದನ್ನು ನಿಪಿ-12 ಎಂದು ಮತ್ತು ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿಪಿ-12(ಎ) ಎಂದು ಗುರ್ತಿಸಲಾಯಿತು. ನಿಪಿ-12 ಕ್ಕೆ ಈಗ ಸುಮಾರು ಹತ್ತು ವರ್ಷಗಳ ಹಿಂದೆ ವಿಶ್ವನಾಥಪುರ ಪೋಲಿಸ್ ಠಾಣೆಯಲ್ಲಿ ಸಹಿ

ಮಾಡಿದ್ದೇನೆ. ನಿಪಿ-11 ಕ್ಕೆ ಸಹಿ ಮಾಡುವಾಗಲೇ ನಿಪಿ-12 ಕ್ಕೂ ಸಹಿ ಮಾಡಿದ್ದೇನೆ. ಪೋಲಿಸರು ಯಾವ ಕಾರಣಕ್ಕಾಗಿ ಸದರಿ ಮಹಜರ್ ಗಳನ್ನು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

3. ಈಗ ತೋರಿಸಲಾದ ಎರಡು ಶರ್ಟ್ ಗಳೇ ಠಾಣೆಯಲ್ಲಿ ನಾನು ನೋಡಿದ್ದೇನೆ. ಅವುಗಳನ್ನು ಒಂದಕ್ಕೆ ಒಂದನ್ನು ಕಟ್ಟಿದ್ದರು. ಸಾಕ್ಷಿಗೆ ತೋರಿಸಿದ ಸದರಿ ಎರಡು ಶರ್ಟ್ ಗಳನ್ನು ಮು.ಮಾ-22 ಮತ್ತು 23 ಎಂದು ಗುರ್ತಿಸಲಾಯಿತು. (ಸದರಿ ಎರಡು ಬಟ್ಟೆಗಳು ಸೀಲ್ ಆದ ಬಟ್ಟೆ ಪ್ಯಾಕ್ ನಲ್ಲಿ ಇದ್ದವು). ಮು.ಮಾ-22 ಮತ್ತು 23 ಇವುಗಳ ಮೇಲಿನ ಸಹಿ ಚೀಟಿಗಳನ್ನು ತೋರಿಸಲಾಗಿ ಸಾಕ್ಷಿದಾರರು ಅವುಗಳ ಮೇಲಿನ ತಮ್ಮ ಸಹಿಗಳನ್ನು ಗುರ್ತಿಸಿದ್ದರಿಂದ ಅವುಗಳನ್ನು ಮು.ಮಾ-22(ಎ) ಮತ್ತು 23(ಎ) ಎಂದು ಗುರ್ತಿಸಲಾಯಿತು.

4. ಠಾಣೆಯಲ್ಲಿ ಒಂದು ಚಾಕುವನ್ನು ನೋಡಿದ್ದೇನೆ. ತುಂಬಾ ದಿವಸವಾದ್ದರಿಂದ ನೋಡಿದರೆ ಗುರ್ತಿಸಲು ಆಗುವುದಿಲ್ಲ. ಸಾಕ್ಷಿಗೆ ಮು.ಮಾ-1 ಮತ್ತು 3 ಇವುಗಳನ್ನು ತೋರಿಸಲಾಗಿ ಅವುಗಳನ್ನು ಗುರ್ತಿಸಲು ಆಗುವುದಿಲ್ಲ ಎನ್ನುತ್ತಾರೆ.

(ಈ ಹಂತದಲ್ಲಿ ಮಾನ್ಯ ಎಸ್ ಪಿ ಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದರಿಂದ ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲು : ಮಾನ್ಯ ವಿಶೇಷ ಸರ್ಕಾರಿ ಅಭಿಯೋಕರವರಿಂದಃ</u>**

5. ದಿಃ12.02.2010 ರಂದು ನನ್ನನ್ನು ಪೋಲಿಸ್ ಠಾಣೆಗೆ ಕರೆಸಿದ ಸಮಯ ರಾತ್ರಿ 10.30 ಘಂಟೆ ಎಂದರೆ ಸರಿಯಲ್ಲ. ಆಗ ಚಾಸಾ-40 ಮತ್ತು 41 ಇವರು ಸಹ ನನ್ನೊಂದಿಗೆ ಇದ್ದರು ಎಂದರೆ ಸಾಕ್ಷಿದಾರರು ಅವರು ನನ್ನೊಂದಿಗೆ ಇದ್ದರು ಆದರೆ ಆಗ ಸಮಯ ಮಧ್ಯಾಹ್ನ ಆಗಿತ್ತು ಎನ್ನುತ್ತಾರೆ. ಆಗ ಡಿವೈಎಸ್ಪಿರವರು ಠಾಣೆಯಲ್ಲಿದ್ದ ಈಗ ತೋರಿಸಿದ 4 ಮತ್ತು 5 ನೇ ಆರೋಪಿತರು ಇವರನ್ನು ತೋರಿಸಿದರು ಎಂದರೆ ಸರಿಯಲ್ಲ. ನಾನು ಅವರನ್ನು ನೋಡಿದಾಗ ಅವರು ತೊಟ್ಟಿದ್ದ ಶರ್ಟ್ ಗಳು ರಕ್ತ ಆಗಿತ್ತು ಎಂದರೆ ಸರಿಯಲ್ಲ. 5 ನೇ ಆರೋಪಿ ಮುನಿರಾಜು ಮು.ಮಾ-

22 ಶರ್ಟ್ ಅನ್ನು ಹಾಗೂ 4ನೇ ಆರೋಪಿ ಗೋವಿಂದರಾಜು ಈತ ಮು.ಮಾ-23 ಶರ್ಟ್ ಅನ್ನು ಧರಿಸಿದ್ದ ಎಂದರೆ ಸರಿಯಲ್ಲ. ತನಿಖಾಧಿಕಾರಿ ಅವುಗಳನ್ನು ನಮ್ಮ ಸಮಕ್ಷಮ ಅಮಾನತುಪಡಿಸಿಕೊಂಡು ಪ್ರತ್ಯೇಕವಾಗಿ ಪ್ಯಾಕ್ ಮಾಡಿ ಸೀಲ್ ಮಾಡಿ ಅವುಗಳಿಗೆ ನಮ್ಮ ಸಹಿ ಚೀಟಿಯನ್ನು ಅಂಟಿಸಿದ್ದಾರೆ ಎಂದರೆ ಸರಿಯಲ್ಲ. ನಿಪಿ-11ನ್ನು ಓದಿ ಹೇಳಿದ ನಂತರ ನಾನು ಮತ್ತು ಚಾಸಾ-40 ಹಾಗೂ 41 ಅದಕ್ಕೆ ಸಹಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಠಾಣೆಯಲ್ಲಿ ಒಂದು ಚಾಕು ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-11 ಮಹಜರ್ ಅನ್ನು ಮಧ್ಯಾಹ್ನ ಮಾಡಿದ್ದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ಮರುದಿನ ದಿಃ13.02.2010ರಂದು ವಿಶ್ವನಾಥಪುರ ಪೋಲಿಸ್ ಠಾಣೆಗೆ ಡಿವೈಎಸ್ಪಿರವರು ನನ್ನನ್ನು, ಚಾಸಾ-40 ಮತ್ತು 41 ಇವರನ್ನು ಮಧ್ಯಾಹ್ನ 4 ಘಂಟೆಗೆ ಪುನಃ ಕರೆಸಿದ್ದರು ಎಂದರೆ ಸರಿಯಲ್ಲ. ಆಗ ಠಾಣೆಯಲ್ಲಿ 4 ಮತ್ತು 5ನೇ ಆರೋಪಿತರು ಇದ್ದರು ಎಂದರೆ ಸರಿಯಲ್ಲ. ಸದರಿ ಇಬ್ಬರು ಆರೋಪಿತರು ಕೃತ್ಯಕ್ಕೆ ಬಳಸಿದ ಚಾಕುವನ್ನು ತಮ್ಮ ಜೊತೆ ಬಂದರೆ ಹಾಜರುಪಡಿಸುವುದಾಗಿ ಹೇಳಿದರು ಎಂದರೆ ಸರಿಯಲ್ಲ. ಆರೋಪಿತರು ಆ ರೀತಿ ಹೇಳಿದ್ದರಿಂದ ಮಹಜರ್ ಮಾಡಲು ತನಿಖಾಧಿಕಾರಿಯವರು ನಮ್ಮನ್ನು ಪಂಚ ಸಾಕ್ಷಿದಾರರಾಗಿ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಸದರಿ ಇಬ್ಬರು ಆರೋಪಿತರು ನಮ್ಮನ್ನು ದ್ಯಾವರಹಳ್ಳಿ-ಚಪ್ಪರದಕಲ್ಲು ರಸ್ತೆಯಲ್ಲಿ ಪಕ್ಕ ಇರುವ ಮೋಟಮುನಿಯಪ್ಪ ಇವರ ಜಮೀನಿನ ಪಕ್ಕಕ್ಕೆ ಕರೆದುಕೊಂಡು ಹೋಗಿ ಅಲ್ಲಿ ನಾವು ಹೋದ ಜೀಪನ್ನು ನಿಲ್ಲಿಸುವಂತೆ ತಿಳಿಸಿದರು ಎಂದರೆ ಸರಿಯಲ್ಲ. ನಂತರ 4 ಮತ್ತು 5ನೇ ಆರೋಪಿತರು ಸದರಿ ಮೋಟಮುನಿಯಪ್ಪನ ಜಮೀನಿನಲ್ಲಿನ ಬಿದಿರು ಪೊದೆಯ ಹತ್ತಿರ ನಮ್ಮನ್ನು ಮತ್ತು ಪೋಲಿಸರನ್ನು ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಸದರಿ ಬಿದಿರು ಪೊದೆ ಸುಮಾರು 13 ಅಡಿ ಸುತ್ತಳತೆಯಷ್ಟು ಅಗಲ ಇದ್ದು ಬಿದಿರಿನ ಮರಗಳು ಸುಮಾರು 8ರಿಂದ 10 ಅಡಿ ಎತ್ತರ ಇದ್ದವು ಎಂದರೆ ಸರಿಯಲ್ಲ. ಅಲ್ಲಿ 5ನೇ ಆರೋಪಿ ಬಿದಿರು ಪೊದೆಯೊಳಗೆ ಕೈ ಹಾಕಿ ನನಗೆ ತೋರಿಸಿದ ಮು.ಮಾ-3 ಚಾಕುವನ್ನು ಹಾಜರುಪಡಿಸಿದ ಎಂದರೆ ಸರಿಯಲ್ಲ.

ಆ ಚಾಕುವಿನ ತುದಿಗೆ ರಕ್ತದ ಕಲೆಯಾಗಿತ್ತು ಎಂದರೆ ಸರಿಯಲ್ಲ. 4 ನೇ ಆರೋಪಿ ಸಹ ಅದೇ ಪೊದೆಯಲ್ಲಿ ಕೈ ಹಾಕಿ ನನಗೆ ತೋರಿಸಿದ ಮು.ಮಾ-1 ಚಾಕುವನ್ನು ಹಾಜರುಪಡಿಸಿದ ಎಂದರೆ ಸರಿಯಲ್ಲ. ಆ ಚಾಕುವಿನ ತುದಿಯಲ್ಲಿಯೂ ಸಹ ರಕ್ತ ಆಗಿತ್ತು ಎಂದರೆ ಸರಿಯಲ್ಲ. ತನಿಖಾಧಿಕಾರಿಯವರು ಎರಡು ಚಾಕುಗಳನ್ನು ಪ್ರತ್ಯೇಕ ಬಿಳಿ ಬಟ್ಟೆ ಚೀಲದಲ್ಲಿ ಹಾಕಿ ಅವುಗಳನ್ನು ಸೀಲ್ ಮಾಡಿ ಅವುಗಳಿಗೆ ನಮ್ಮ ಸಹಿ ಚೀಟಿಗಳನ್ನು ಅಂಟಿಸಿದರು ಎಂದರೆ ಸರಿಯಲ್ಲ. ನಂತರ ಪೋಲಿಸರು ಸ್ಥಳದಲ್ಲಿಯೇ ನಿಪಿ-12 ರಂತೆ ಮಹಜರ್ ಮಾಡಿ ಅಲ್ಲೇ ನನ್ನ ಸಹಿಯನ್ನು ಅದಕ್ಕೆ ಪಡೆದಿದ್ದಾರೆ ಎಂದರೆ ಸರಿಯಲ್ಲ. ಮಹಜರ್ ಅನ್ನು ಸಂಜೆ 04.00 ರಿಂದ 05.00 ಘಂಟೆ ಅವಧಿಯಲ್ಲಿ ಮಾಡಲಾಗಿದೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಎಲ್ಲಾ ಆರೋಪಿತರ ಪರ ವಕೀಲರು ತಮ್ಮ ಪರವಾಗಿ ಈ ಸಾಕ್ಷಿಯ ಪಾಟೀ ಸವಾಲು ಇಲ್ಲ ಎಂದು ತಿಳಿಸುತ್ತಾರೆ.

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸಿದ್ದೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು